# ಆದರ್ಶ ಗ್ರಾಮ: ಸ್ಥಳೀಯ ನೈಸರ್ಗಿಕ ಸಂಪನ್ಮೂಲ

ರಾಮಚಂದ್ರ ಟಿ. ವಿ.,[1,2,3] ಗಣೇಶ ಹೆಗಡೆ,[1] ಸುಭಾಷ್ ಚಂದ್ರನ್ ಎಂ.ಡಿ.,[1] ತೇಜಸ್ವಿನಿ ಅನಂತಕುಮಾರ್,[4] ಶ್ರೀ ವಿಷ್ಣುಮಯಾನಂದ ಸ್ವಾಮೀಜಿ[5]

## ಗ್ರಾಮ ಸ್ವಾವಲಂಬನೆ

'ಅಭಿವೃದ್ಧಿ ಹೊಂದಿದ ಭಾರತ'ದ ಕನಸಿನ ಸಾಕಾರ, ಸಂಪೂರ್ಣ ಸ್ವಾವಲಂಬಿ ಗ್ರಾಮಗಳಿಂದ ಮಾತ್ರ ಸಾಧ್ಯ. ವಿಕೇಂದ್ರಿಕೃತ ಹಾಗೂ ಗ್ರಾಮೀಣ ಯುವಕರನ್ನು ಬಲಗೊಳಿಸುವ, ಸ್ಥಳೀಯ ನೈಸರ್ಗಿಕ ಸಂಪನ್ಮೂಲಗಳನ್ನು ಸುಸ್ಥಿರವಾಗಿ ಬಳಸಿಕೊಳ್ಳುವ ಅಭಿವೃದ್ಧಿ ಯೋಜನೆಗಳಿಂದ ಮಾತ್ರ ಗ್ರಾಮ ಸ್ವಾವಲಂಬನೆಯನ್ನು ಸಾಧಿಸಬಹುದು. ಭಾರತದ ಶೇ. 68ರಷ್ಟು ಜನರು ವ್ಯವಸಾಯವನ್ನೇ ಪ್ರಮುಖವಾಗಿ ಅವಲಂಬಿಸಿರುವ ಹಳ್ಳಿಗಳಲ್ಲಿ ವಾಸಿಸುತ್ತಾರೆ. ಭಾರತವು ಕೃಷಿ ಉತ್ಪನ್ನಗಳ ತಯಾರಿಕೆಯಲ್ಲಿ ಜಗತ್ತಿನಲ್ಲಿ ಎರಡನೇ ಸ್ಥಾನದಲ್ಲಿದೆ. ಆರಣ್ಯ ಉತ್ಪನ್ನಗಳು ಹಾಗೂ ಮೀನುಗಾರಿಕೆಯನ್ನು ಒಳಗೊಂಡ ಕೃಷಿಯು, ಶೇ. 50ಕ್ಕಿಂತ ಹೆಚ್ಚು ಜನರಿಗೆ ಉದ್ಯೋಗಾವಕಾಶವನ್ನು ಸೃಷ್ಟಿಸುತ್ತದೆ ಮತ್ತು ಜಿಡಿಪಿಯ ಶೇ. 18ರಷ್ಟು ಪಾಲನ್ನು ಹೊಂದಿದೆ. ದೇಶದ ಆರ್ಥಿಕ ಪ್ರಗತಿಗೆ ಕೃಷಿ ವಲಯದ ಕೊಡುಗೆ ಅಗಾಧವಾಗಿದ್ದರೂ, ಕೃಷಿ ಅಭಿವೃದ್ಧಿಗೆ ಸರ್ಕಾರದ ಪ್ರೋತ್ಸಾಹ ಸೀಮಿತವಾಗಿರುವುದು ವಿಪರ್ಯಾಸ.

## ವಿಕೇಂದ್ರಿಕೃತ ಆಡಳಿತ

ಭಾರತ ಹಳ್ಳಿಗಳ ದೇಶ. ದೇಶದ ಪ್ರಗತಿ ಗ್ರಾಮಗಳ ಅಭಿವೃದ್ಧಿಯನ್ನು ಅವಲಂಬಿಸಿದೆ. ಗ್ರಾಮವು ದೇಶದ ಅತಿ ಚಿಕ್ಕ ಆಡಳಿತಾತ್ಮಕ ಘಟಕ. ವಿಕೇಂದ್ರಿಕೃತ ಆಡಳಿತದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಗ್ರಾಮಗಳ ಉದಯವಾಯಿತು. ಇದರ ಕುರುಹುಗಳನ್ನು ವೇದಕಾಲದ 'ಸಭಾ'ಗಳಲ್ಲಿ ಸಹ ಕಾಣಬಹುದು. ಮುಂದೆ ಸಿಂಧೂ ಬಯಲಿನ ನಾಗರಿಕತೆಯಲ್ಲಿ ಹೆಚ್ಚು ಅಭಿವೃದ್ಧಿ ಹೊಂದಿದ ಹಳ್ಳಿಗಳ ಹಾಗೂ ನಗರಗಳ ಉಲ್ಲೇಖವಿದೆ. ಸ್ವಾತಂತ್ರ್ಯಾನಂತರ 1958ರಲ್ಲಿ, ಒಂದೇ ತೆರೆನಾದ ಸಾಮಾಜಿಕ, ಆರ್ಥಿಕ ಹಾಗೂ ಭೌಗೋಳಿಕ ಲಕ್ಷಣಗಳನ್ನು ಹೊಂದಿದ ಹಳ್ಳಿಗಳನ್ನು ಒಟ್ಟುಗೂಡಿಸಿ 'ಗ್ರಾಮ ಪಂಚಾಯತಿ'ಯನ್ನು ಸೃಷ್ಟಿಸಲಾಯಿತು. ವಿಕೇಂದ್ರಿಕೃತ ಸ್ಥಳೀಯ ಆಡಳಿತವನ್ನು ಅನುಷ್ಠಾನಗೊಳಿಸಲು 1994ರಲ್ಲಿ ಸಂವಿಧಾನದ 73 ಮತ್ತು 74ನೇ ತಿದ್ದುಪಡಿಯ ಅನ್ವಯ ಪಂಚಾಯತ್ ರಾಜ್ ಕಾಯ್ದೆಯನ್ನು ಜಾರಿಗೆ ತರಲಾಯಿತು. ಇದು ಸಂವಿಧಾನಾತ್ಮಕವಾಗಿ ಗ್ರಾಮಗಳ ಪುನರ್ರಚನೆಗೆ ಅನುವುಮಾಡಿಕೊಟ್ಟಿತು ಹಾಗೂ ಗ್ರಾಮ ಪಂಚಾಯತಿಗೆ ತನ್ನದೇ ಆದ ಅಧಿಕಾರ ಮತ್ತು ಜವಾಬ್ದಾರಿಗಳನ್ನು ನೀಡಿತು. ಗ್ರಾಮ ಸಭೆಗಳ ಮೂಲಕ ನಡೆಯುವ ಸ್ವಯಮಾಡಳಿತವು ನಿಯಮಾವಳಿಗಳನ್ನು ರೂಪಿಸುವಲ್ಲಿ ಹಾಗೂ ಸ್ಥಳೀಯವಾಗಿ ಅವುಗಳನ್ನು ಕಾರ್ಯಗತಗೊಳಿಸುವಲ್ಲಿ ಗ್ರಾಮ ಪಂಚಾಯ್ತಿಯು ಅತಿ ಮುಖ್ಯ ಪಾತ್ರ ವಹಿಸುತ್ತದೆ.

ಬಹುತೇಕ ಗ್ರಾಮಾಭಿವೃದ್ಧಿ ಯೋಜನೆಗಳನ್ನು ಪ್ರದೇಶದ ಬಡತನ, ನಿರುದ್ಯೋಗ, ಅನಕ್ಷರತೆ, ಅನಾರೋಗ್ಯ ಹಾಗೂ ಮಕ್ಕಳ ಕುಪೋಷಣೆ ನಿವಾರಿಸಲು ಮತ್ತು ಜೀವನಾವಶ್ಯಕ ವಸ್ತುಗಳನ್ನು ಪೂರೈಸುವ ದೃಷ್ಟಿಯಿಂದಲೇ ರೂಪಿಸಲಾಗಿದೆ. ಅದಾಗ್ಯೂ, ಅನುಷ್ಠಾನದ ಕೊರತೆಯಿಂದಾಗಿ ಬಹುಪಾಲು ಹಳ್ಳಿಗಳು ಸ್ವಚ್ಛ ಕುಡಿಯುವ ನೀರು, ಶೌಚಾಲಯ, ಪ್ರಾಥಮಿಕ ಆರೋಗ್ಯ ಕೇಂದ್ರ, ಶಿಕ್ಷಣ, ವಿದ್ಯುತ್, ರಸ್ತೆ ಮತ್ತು ಸಂಚಾರ, ಬ್ಯಾಂಕ್ ಹಾಗೂ ಹೊಸ ಯುಗದ ಸಂವಹನ ಸೌಕರ್ಯಗಳಿಂದ ವಂಚಿತವಾಗಿವೆ. ಭಾರತ ಸರ್ಕಾರವು 2015ರಲ್ಲಿ ಜಾರಿಗೊಳಿಸಿದ ಸಂಸದರ ಆದರ್ಶ ಗ್ರಾಮ ಯೋಜನೆಯ ಮಾರ್ಗಸೂಚಿಯು, ಪ್ರತೀ ವರ್ಷ ಸಂಸದರ ಕ್ಷೇತ್ರದಿಂದ ಒಂದು ಗ್ರಾಮವನ್ನು ಆದರ್ಶ ಗ್ರಾಮವನ್ನಾಗಿ ರೂಪಿಸಲು ಮಹಾತ್ಮಾ ಗಾಂಧೀಜಿಯವರ "ಗ್ರಾಮ ಸ್ವರಾಜ್ಯ"ದ ತತ್ವವನ್ನು ಮತ್ತು ಗ್ರಾಮಸ್ವಾವಲಂಬನೆಯ ಅಗತ್ಯತೆಯನ್ನು ಒತ್ತಿ ಹೇಳುತ್ತದೆ. ಕೇವಲ ಸ್ವಾವಲಂಬೀ ಪಂಚಾಯತ ಮಾತ್ರ ಭವಿತವ್ಯದಲ್ಲಿ ಆದರ್ಶ ಗ್ರಾಮವಾಗಿ ಬೆಳೆಯಲು ಸಾಧ್ಯ.

## ಆದರ್ಶ ಗ್ರಾಮದ ಪರಿಕಲ್ಪನೆ

ಆದರ್ಶ ಗ್ರಾಮದ ಪರಿಕಲ್ಪನೆಯು, ಸರಿಯಾದ ಸ್ಥಳೀಯ ತಂತ್ರಜ್ಞಾನಗಳ ಸಹಾಯದಿಂದ ನೈಸರ್ಗಿಕ ಸಂಪನ್ಮೂಲಗಳನ್ನು ಉತ್ತಮವಾಗಿ ಬಳಸಿಕೊಂಡು ಜನರನ್ನು ಆರ್ಥಿಕವಾಗಿ, ನೈತಿಕವಾಗಿ ಬಲಗೊಳಿಸುವ ಮೂಲಕ ಗ್ರಾಮಸ್ವಾವಲಂಬನೆಯನ್ನು ಸಾಧಿಸಲು ನೆರವಾಗುತ್ತದೆ. ಪ್ರಸ್ತುತ ಈ ಕಲ್ಪನೆಯನ್ನು ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲೂಕು ವ್ಯಾಪ್ತಿಯ ರಾಗಿಹಳ್ಳಿ ಪಂಚಾಯತಿಗೆ ಅನ್ವಯವಾಗುವಂತೆ ಸಿದ್ಧಪಡಿಸಲಾಗಿದೆ. ಪಂಚಾಯತಿಯ ಎಲ್ಲಾ ವಲಯಗಳ ಅಭಿವೃದ್ಧಿಗೆ ಯೋಜನೆಗಳನ್ನು ಸ್ಥಳೀಯ ಸಂಪನ್ಮೂಲ ಹಾಗೂ ಜನರ ಅವಶ್ಯಕತೆಗಳನ್ನು ಅಭ್ಯಸಿಸಿ ಸಿದ್ಧಪಡಿಸಲಾಗಿದೆ. ಪ್ರಸ್ತಾವಿತ ಯೋಜನೆಯು ವ್ಯವಸಾಯ, ಜಲಾನಯನ ಪ್ರದೇಶದ ನಿರ್ವಹಣೆ ಮತ್ತು ಅಭಿವೃದ್ಧಿ, ರೇಷ್ಮೆ ಕೃಷಿ, ತೋಟಗಾರಿಕೆ ಹಾಗೂ ಹೈನುಗಾರಿಕೆಗೆ ಇಂಬು ನೀಡುವ ಮೂಲಕ ಗ್ರಾಮದ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವಲ್ಲಿ ಸಹಕಾರಿಯಾಗಿದೆ.

## ಪ್ರದೇಶದ ಅವಶ್ಯಕತೆಗಳು

ಸ್ಥಳೀಯ ಸಂಪನ್ಮೂಲಗಳ ಲಭ್ಯತೆ ಹಾಗೂ ಗ್ರಾಮ ಜೀವನದ ಅಧ್ಯಯನವು ಪ್ರದೇಶದ ಅವಶ್ಯಕತೆಗಳನ್ನು ಅರಿಯಲು ಸಹಾಯ ಮಾಡುತ್ತದೆ. ಪ್ರಸ್ತುತ, ರಾಗಿಹಳ್ಳಿಯಲ್ಲಿ ಸೂಕ್ಷ್ಮ ಜಲಾನಯನ ಪ್ರದೇಶ ನಿರ್ವಹಣೆಯ ಮೂಲಕ ಮಣ್ಣು ಹಾಗೂ ನೀರಿನ ಸಂರಕ್ಷಣೆ, ಹಣ್ಣು ಬಿಡುವ ಸ್ಥಳೀಯ ಸಸ್ಯ ಪ್ರಭೇದಗಳನ್ನು ನೆಡುವುದು, ಔಷಧಿ ಸಸ್ಯಗಳನ್ನು ಬೆಳೆಸುವುದು, ನವೀಕರಿಸಬಹುದಾದ ಶಕ್ತಿ ಮೂಲಗಳನ್ನು ಬಳಸಿಕೊಂಡು ವಿದ್ಯುತ್ ಉತ್ಪಾದನೆ ಮತ್ತು ವಿತರಣೆ ಮತ್ತು ಹಾಲಿನ ಡೈರಿಯನ್ನು ಯಾಂತ್ರಿಕೃತಗೊಳಿಸಿ ಮಾನವ ಹಸ್ತಕ್ಷೇಪವನ್ನು ನಿವಾರಿಸುವ ಕಾರ್ಯಗಳನ್ನು ತ್ವರಿತವಾಗಿ ಮಾಡಬೇಕಾಗಿದೆ.

ಸೂಕ್ಷ್ಮ ಜಲಾನಯನ ಪ್ರದೇಶದ ನಿರ್ವಹಣೆ ಮತ್ತು ಅಭಿವೃದ್ಧಿಯು ಬಹುಮುಖ್ಯವಾದ ನೀರಿನ ಅಭಾವವನ್ನು ಕಡಿಮೆ ಮಾಡುವುದಲ್ಲದೇ, ಕೃಷಿಕರ ಆರ್ಥಿಕ ಸ್ಥಿತಿಯನ್ನು ಸುಧಾರಿಸುತ್ತದೆ. ಸಾಮುದಾಯಿಕ ಬಿಸಿನೀರು ಪೂರೈಕೆ, ವೃತ್ತಿಪರ ತರಬೇತಿ (ಹೈನುಗಾರಿಕೆ, ಮೇವು ಹಾಗೂ ವ್ಯವಸಾಯಗಳನ್ನಾಧರಿಸಿ) ಹಾಗೂ ಕೌಶಲ್ಯ ವರ್ಧನೆ ಕೇಂದ್ರಗಳನ್ನು ತೆರೆಯುವುದರಿಂದ ಜನರಿಗೆ ಶಿಕ್ಷಣ ದೊರೆಯುತ್ತದೆ, ಉದ್ಯೋಗ ಸೃಷ್ಟಿಯಾಗುತ್ತದೆ ಹಾಗು ಹೈನುಗಾರಿಕೆಯ ಬಲವರ್ಧನೆಯಾಗುತ್ತದೆ. ಸೌರ ಮೈಕ್ರೋಗ್ರಿಡ್ (ವಿಕೇಂದ್ರೀಕೃತ ವಿದ್ಯುತ್ ಉತ್ಪಾದನೆ ಮತ್ತು ವಿತರಣೆ), ಸಾಮುದಾಯಿಕ ಗೋಬರ್ ಅನಿಲ ಉತ್ಪಾದನೆ, ಕೃಷಿ ಹಾಗೂ ಆಹಾರ ಉತ್ಪನ್ನಗಳ ಸಂಸ್ಕರಣೆ, ಸಾವಯವ ಗೊಬ್ಬರ ತಯಾರಿಕೆ, ಔಷಧಿ ಸಸ್ಯಗಳನ್ನು ಬೆಳೆಸುವುದು ಮತ್ತು ಔಷಧ ಉತ್ಪಾದನೆ ಮುಂತಾದ ಚಟುವಟಿಕೆಗಳನ್ನು ಸಮುದಾಯ ಗುಂಪುಗಳಲ್ಲಿ (ಕ್ಲಸ್ಟರ್) ಪರಿಚಯಿಸುವ ಮೂಲಕ ಕೈಗಾರಿಕೆಗಳ ವಿಕೇಂದ್ರಿಕರಣವನ್ನು ಸಾಧಿಸಬಹುದು. ಪಂಚಾಯತ್ ವ್ಯಾಪ್ತಿಯ ಎಲ್ಲ ಹಳ್ಳಿಗಳಲ್ಲಿ ಪ್ರಾಥಮಿಕ ಆರೋಗ್ಯ, ಶಿಕ್ಷಣ, ಶೌಚಾಲಯ, ಸ್ವಚ್ಛ ಕುಡಿಯುವ ನೀರು ಹಾಗು ಬಿಸಿ ನೀರಿನ ಸೌಲಭ್ಯಗಳನ್ನು ಉತ್ತಮಗೊಳಿಸಬೇಕಾಗಿದೆ.

'ಆದರ್ಶ ಗ್ರಾಮ'ದ ಪರಿಕಲ್ಪನೆಯು ಸೂಕ್ತ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ಸುಸ್ಥಿರ ಹಾಗು ಸ್ವಾವಲಂಬಿ ಗ್ರಾಮದ ರೂಪುರೇಷೆಗಳಿಗೆ ಸಾಂಸ್ಥಿಕ ರೂಪ ಕೊಡುತ್ತದೆ. ಇದು ವಿಕೇಂದ್ರಿಕೃತ ಆಡಳಿತವನ್ನು ಉತ್ತೇಜಿಸುವುದಲ್ಲದೇ, ಸರ್ಕಾರಿ ಮತ್ತು

ಸರ್ಕಾರೇತರ ಸಂಸ್ಥೆಗಳ ನೆರವಿನೊಂದಿಗೆ ಸ್ಥಳೀಯವಾಗಿ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಪೂರಕವಾಗಿದೆ. ಆದರ್ಶ ಗ್ರಾಮದ ಕಲ್ಪನೆಯನ್ನು ದೇಶದ ಇತರ ಹಳ್ಳಿಗಳಲ್ಲಿಯೂ ಅನುಷ್ಠಾನಗೊಳಿಸಬಹುದು ಹಾಗೂ ನೈಸರ್ಗಿಕ ಸಂಪನ್ಮೂಲಗಳನ್ನು ವ್ಯವಸ್ಥಿತವಾಗಿ ಬಳಸಿಕೊಂಡು ನೀರಾವರಿ ವಿಧಾನ, ಕೃಷಿ ಪದ್ಧತಿ ಹಾಗೂ ಹೈನುಗಾರಿಕೆಯಲ್ಲಿ ಹೆಚ್ಚಿನ ಪ್ರಗತಿ ಸಾಧಿಸಬಹುದು.

## ಆದರ್ಶ ಗ್ರಾಮ


ಗಾಂಧೀಜಿಯವರ ಕಲ್ಪನೆಯಂತೆ ಆದರ್ಶ ಗ್ರಾಮವು ಸ್ವಯಮಾಡಳಿತ ಹೊಂದಿದ್ದು ತನ್ನ ಎಲ್ಲಾ ಅಗತ್ಯತೆಗಳಿಗೆ ನಗರ ಹಾಗೂ ಪಟ್ಟಣಗಳಿಂದ ಸ್ವತಂತ್ರವಾಗಿರಬೇಕು. ಇದು ಗ್ರಾಮದಲ್ಲಿ ಸಾಕಷ್ಟು ಪ್ರಮಾಣದ ಆಹಾರ ಧಾನ್ಯ, ಹಾಲು ಮತ್ತು ತರಕಾರಿಗಳ ಉತ್ಪಾದನೆಯನ್ನು ಖಚಿತಪಡಿಸುತ್ತದೆ. ಈ ಗ್ರಾಮದಲ್ಲಿ ವ್ಯವಸ್ಥಿತ ಶಾಲೆಯಿದ್ದು ಎಲ್ಲಾ ಮಕ್ಕಳಿಗೂ ಪ್ರಾಥಮಿಕ ಶಿಕ್ಷಣ ಕಡ್ಡಾಯವಾಗಿರುತ್ತದೆ. ಅಲ್ಲದೇ, ಈ ಶಾಲೆಯು ಶುದ್ಧ ಕುಡಿಯುವ ನೀರು, ಶೌಚಾಲಯ ಹಾಗೂ ಆಟದ ಬಯಲಿನಿಂದ ಸುಸಜ್ಜಿತವಾಗಿರಬೇಕು. ಗ್ರಾಮವು ನಿವಾಸಿಗಳ ಉಪಯೋಗಕ್ಕಾಗಿ ಶುದ್ಧ ಕುಡಿಯುವ ನೀರಿನ ಮೂಲಗಳನ್ನು ಕಾಪಾಡಬೇಕು.

ಯಾವುದೇ ಸಾಮಾಜಿಕ ತಾರತಮ್ಯಕ್ಕೆ ಎಡೆಯಿಲ್ಲದೇ ಊರಿನ ಎಲ್ಲಾ ಚಟುವಟಿಕೆಗಳನ್ನು ಗ್ರಾಮಸ್ಥರೆಲ್ಲರೂ ಒಂದಾಗಿ ಮಾಡಬೇಕು. ಗ್ರಾಮದ ಎಲ್ಲಾ ಜನರ ಪಾಲ್ಗೊಳ್ಳುವಿಕೆಯಿಂದ ಪರಿಣಾಮಕಾರಿಯಾಗಿ ಮತ್ತು ದಕ್ಷವಾಗಿ ಸಾಧ್ಯವಿರುವ ಕೆಲವು ಸೇವೆಗಳನ್ನು ಸಹ ಆದರ್ಶ ಗ್ರಾಮ ವ್ಯವಸ್ಥೆಯು ಪ್ರೋತ್ಸಾಹಿಸುತ್ತದೆ. ಈ ಸೇವೆಗಳು ಶುದ್ಧ ಕುಡಿಯುವ ನೀರಿನ ಪೂರೈಕೆ, ಪ್ರಾಥಮಿಕ ಶಿಕ್ಷಣ, ವಸತಿ ಮತ್ತು ಆಹಾರ, ಯುವಕರಿಗೆ ಉದ್ಯೋಗ, ಸಾಕು ಪ್ರಾಣಿಗಳಿಗೆ ಮೇವು ಮತ್ತು ಹುಲ್ಲುಗಾವಲು ಹಾಗೂ ಕೃಷಿ ಉತ್ಪನ್ನಗಳಿಗೆ ಸರಿಯಾದ ಮಾರುಕಟ್ಟೆ ಮುಂತಾದವುಗಳನ್ನು ಒಳಗೊಂಡಿದೆ.'

ಆದರ್ಶ ಗ್ರಾಮದ ರೂಪುರೇಷೆಯು ಆ ಪ್ರದೇಶದಲ್ಲಿನ ಸಂಪನ್ಮೂಲಗಳ ಲಭ್ಯತೆ, ಜನರ ಉದ್ಯೋಗ, ಸ್ಥಳೀಯ ಸಹಕಾರ ಹಾಗೂ ಸಾಮಾಜಿಕ ಸಮ್ಮತಿಯನ್ನು ಅವಲಂಬಿಸಿರುತ್ತದೆ. ಹಾಗೆಯೇ, ಪ್ರದೇಶದ ಸಾಮಾಜಿಕ, ಆರ್ಥಿಕ ಹಾಗೂ ಭೌಗೋಳಿಕ ಸ್ಥಿತಿಯ ಜ್ಞಾನದ ಜೊತೆಗೆ, ಲಭ್ಯವಿರುವ ಸಂಪನ್ಮೂಲಗಳ ತಿಳುವಳಿಕೆಯೂ ಅತಿ ಅವಶ್ಯ. ಕೃಷಿ, ಇಂಧನ, ಹೈನುಗಾರಿಕೆ ಹಾಗೂ ಜಲಮೂಲಗಳ ಪ್ರಸಕ್ತ ಸ್ಥಿತಿಗತಿ ಹಾಗೂ ಜನರು ಎದುರಿಸುತ್ತಿರುವ ತಂತ್ರಜ್ಞಾನದ ಕೊರತೆ ಇವುಗಳ ಅಧ್ಯಯನವು ಸೂಕ್ತ ಮತ್ತು ಸುಸ್ಥಿರ ತಂತ್ರಜ್ಞಾನದ ಅಳವಡಿಕೆಗೆ ಸಹಕಾರಿಯಾಗಿದೆ. ಆದರ್ಶ ಗ್ರಾಮದ ಕಲ್ಪನೆಯು ನೈಸರ್ಗಿಕ ತತ್ವಗಳನ್ನು ಒಳಗೊಂಡ ನಿರ್ವಹಣಾ ವಿಧಾನವಾಗಿದ್ದು, ಆಹಾರ, ನೀರು, ಶಕ್ತಿ, ಶಿಕ್ಷಣ, ಉದ್ಯೋಗ ಮುಂತಾದ ಪ್ರಮುಖ ಕ್ಷೇತ್ರಗಳಲ್ಲಿ ಸ್ವಾವಲಂಬನೆಯನ್ನು ಸಾಧಿಸಲು ಅಗತ್ಯ ತಾಂತ್ರಿಕ ಪರಿಹಾರಗಳನ್ನು ಸೂಚಿಸುತ್ತದೆ. ಚಿತ್ರ 2ರಲ್ಲಿ ಗ್ರಾಮ ಸ್ವಾವಲಂಬನೆಯನ್ನು ಸಾಧಿಸಲು ಬೇಕಾದ ನೈಸರ್ಗಿಕ, ಸಾಮಾಜಿಕ ಹಾಗೂ ತಾಂತ್ರಿಕ ಅಂಶಗಳನ್ನು ಮತ್ತು ವಿವಿಧ ಸಂಸ್ಥೆಗಳ ಪಾತ್ರವನ್ನು ವಿವರಿಸಲಾಗಿದೆ.

## ಯೋಜನೆಯ ಮೊದಲ ಹಂತ

ಯೋಜನೆಯ ಮೊದಲ ಹಂತದಲ್ಲಿ ಭೂಮಿ, ನೀರು, ಶಕ್ತಿ ಮತ್ತು ಮಾನವ ಸಂಪನ್ಮೂಲಗಳ ಲಭ್ಯತೆಯನ್ನು ಅಂದಾಜಿಸಲಾಗಿದೆ. ಲಭ್ಯವಿರುವ




**ಚಿತ್ರ 1: ಆದರ್ಶ ಗ್ರಾಮದ ಪರಿಕಲ್ಪನೆ**


ಸಂಪನ್ಮೂಲಗಳ ಪ್ರಮಾಣದ ಜೊತೆಗೆ ಅವುಗಳ ಸ್ಥಿತಿಗತಿ ಮತ್ತು ಗುಣಮಟ್ಟವನ್ನು ಅಭ್ಯಸಿಸಲಾಗಿದೆ. ಸುಶಿಕ್ಷಿತ ಮತ್ತು ವಿವೇಕಯುತ ನಾಗರಿಕರು, ಯೋಜನೆಯ ಅತೀ ಮುಖ್ಯ ಭಾಗವಾಗಿದ್ದು, ಯಾವುದೇ ಉತ್ಪನ್ನದ ಅಥವಾ ಸಂಪನ್ಮೂಲದ ಬಳಕೆದಾರರೂ ಸಹ ಆಗುತ್ತಾರೆ.

ತಂತ್ರಜ್ಞಾನವು ಕೃಷಿ, ನೀರು, ಹಾಲು, ಭೂಮಿ ಮೊದಲಾದ ಸಂಪನ್ಮೂಲಗಳನ್ನು ಬಳಸಿಕೊಂಡು ಸಿದ್ಧ ಉತ್ಪನ್ನಗಳನ್ನು ತಯಾರಿಸುತ್ತದೆ. ಹಾಗಯೇ, ಕೆಲವು ತಂತ್ರಜ್ಞಾನಗಳಿಂದ ನೈಸರ್ಗಿಕ ಸಂಪನ್ಮೂಲಗಳ ಸ್ಥಿತಿಯನ್ನು ಉತ್ತಮಪಡಿಸಬಹುದು. ಇದು ನೈಸರ್ಗಿಕ ಸಮತೋಲನವನ್ನು ಕಾಯ್ದುಕೊಳ್ಳಲು ಸಹಾಯ ಮಾಡುತ್ತದೆ. ಉದಾಹರಣೆಗೆ, ಇಂಗುಗುಂಡಿ ಹಾಗೂ ಕಾಲುವೆ ತಡೆಗಳು ನೀರಿಂಗುವಿಕೆಯನ್ನು ಹೆಚ್ಚಿಸಿ ಅಂತರ್ಜಲ ಮರುಪೂರಣಕ್ಕೆ ಸಹಾಯಕವಾಗಿವೆ. ಹಾಗೆಯೇ, ಇಳಿಜಾರಿನ ಪ್ರದೇಶಗಳಲ್ಲಿ ನಿಂಬೆ ಹುಲ್ಲು ಮತ್ತು ಲಾವಂಚ ಹುಲ್ಲನ್ನು ಬೆಳೆಸುವುದರಿಂದ ಮಣ್ಣಿನ ಸವಕಳಿ ಕಡಿಮೆಯಾಗುತ್ತದೆ ಹಾಗೂ ಹರಿಯುವ ನೀರಿನ ವೇಗ ತಗ್ಗುತ್ತದೆ. ಹಾಗಾಗಿ, ತಂತ್ರಜ್ಞಾನದ ಅನ್ವಯವು ಉತ್ಪಾದನೆಯನ್ನು ಹೆಚ್ಚಿಸುವುದರ ಜೊತೆಗೆ ನೈಸರ್ಗಿಕ ಸಂಪನ್ಮೂಲಗಳ ಸುಸ್ಥಿರತೆಯನ್ನು ಸಹ ಕಾಪಾಡಬೇಕು.

## 'ಸುಸ್ಥಿರ ಚಟುವಟಿಕೆ'

ಗ್ರಾಮೀಣ ಪರಿಸರದಲ್ಲಿ ಪೂರ್ಣಗೊಳ್ಳುವ ಕಾರ್ಯಚಕ್ರವನ್ನು ಹೊಂದಿರುವ ತಾಂತ್ರಿಕತೆಗಳನ್ನು ಸುಸ್ಥಿರ ಚಟುವಟಿಕೆಗಳೆನ್ನಬಹುದು. ಯಾವ ಚಟುವಟಿಕೆಯು, ಅದು ಉಪಯೋಗಿಸಿಕೊಂಡ ಸಂಪನ್ಮೂಲಗಳನ್ನು ಮರುಪೂರಣ ಮಾಡುವುದೋ ಅಥವಾ ಆ ಸಂಪನ್ಮೂಲ ಬಳಕೆಯಿಂದ ಪರಿಸರದ ಮೇಲೆ ಯಾವುದೇ ಹಾನಿಯುಂಟು ಮಾಡುವುದಿಲ್ಲವೋ ಅದು 'ಸುಸ್ಥಿರ ಚಟುವಟಿಕೆ'ಯಾಗಿದೆ. ಸಾಮಾನ್ಯವಾಗಿ ಬಹುತೇಕ ಗ್ರಾಮೀಣ ಚಟುವಟಿಕೆಗಳು ತ್ಯಾಜ್ಯ ಅಥವಾ ಶೇಷದ ರೂಪದಲ್ಲಿ ಸಂಪನ್ಮೂಲಗಳ ಮರುಪೂರಣಕ್ಕೆ ಸಹಾಯಕವಾಗಿದೆ. ಉದಾಹರಣೆಗೆ, ಮಣ್ಣಿನ ಸತ್ತ್ವವನ್ನು ಬಳಸಿಕೊಂಡು ಬೆಳೆದ ಬೆಳೆಯ ಕೆಲವು ಭಾಗ ದನಕರುಗಳ ಆಹಾರವಾಗಿದೆ. ಅವುಗಳ ಸಗಣಿಯಿಂದ ಗೊಬ್ಬರ ತಯಾರಿಸಿ ಉಪಯೋಗಿಸುವುದರಿಂದ ಸಾರ ಮರಳಿ ಮಣ್ಣನ್ನು ಸೇರಿ ಚಕ್ರ ಪೂರ್ಣಗೊಳ್ಳುತ್ತದೆ. ಈ ರೀತಿಯ ಮರು ಪೂರೈಕೆಯ ಸರಣಿಯನ್ನು ಕಾಪಾಡುವುದು ಮತ್ತು ಉತ್ತೇಜಿಸುವುದು ಸುಸ್ಥಿರ ತಾಂತ್ರಿಕತೆಯ ಬಹುಮುಖ್ಯ ಲಕ್ಷಣ. ಆದರ್ಶ ಗ್ರಾಮದ ರೂಪುರೇಷೆಯು ಇಂತಹ ಅನೇಕ ಚಟುವಟಿಕೆಗಳನ್ನು ಪ್ರಸ್ತಾಪಿಸಿದೆ.

ಆದರ್ಶ ಗ್ರಾಮದ ಯೋಜನೆಗಳನ್ನು ಕಾರ್ಯಗತಗೊಳಿಸಲು ಸ್ಥಳೀಯ ಸಂಘ-ಸಂಸ್ಥೆಗಳ ಸಹಕಾರ ಅತಿ ಮುಖ್ಯ. ಗ್ರಾಮ ಪಂಚಾಯಿತಿಯು ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸುವಲ್ಲಿ ಮತ್ತು ಫಲಾನುಭವಿಗಳಿಂದ ಪ್ರತಿಕ್ರಿಯೆ ಪಡೆಯುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಇದು ಇತರ ಸ್ವಸಹಾಯ ಗುಂಪುಗಳೊಂದಿಗೆ, ಗ್ರಾಮ ಅರಣ್ಯ ಸಮಿತಿಯೊಂದಿಗೆ ಹಾಗೂ ಸರ್ಕಾರೇತರ ಸಂಘ-ಸಂಸ್ಥೆಗಳ ಸಹಭಾಗಿತ್ವದಲ್ಲಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಸ್ವಾತಂತ್ರ್ಯವನ್ನು ಹೊಂದಿದೆ. ಸರ್ಕಾರಿ ಹಾಗೂ ಖಾಸಗಿ ಸಂಶೋಧನಾ ಸಂಸ್ಥೆಗಳು ಸಹ ಕೌಶಲ್ಯ ವರ್ಧಕ ತರಬೇತಿಗಳಿಂದ, ನೂತನ ತಾಂತ್ರಿಕತೆಯನ್ನು ಪರಿಚಯಿಸುವುದರ ಮೂಲಕ ಗ್ರಾಮೀಣ ಪರಿಸರದ ಪ್ರಗತಿಗೆ ಕೊಡುಗೆ ನೀಡಬಹುದು.




ಚಿತ್ರ 2: ಆದರ್ಶ ಗ್ರಾಮ ಕಾರ್ಯಯೋಜನೆಯ ಪ್ರಮುಖ ಅಂಗಗಳು

*[1]ಶಕ್ತಿ ಮತ್ತು ಜೌಗುಭೂಮಿ ಸಂಶೋಧನಾ ವಿಭಾಗ (EWRG), ಪರಿಸರ ವಿಜ್ಞಾನ ಕೇಂದ್ರ [CES]
[2]ಸುಸ್ಥಿರ ತಂತ್ರಜ್ಞಾನ ಕೇಂದ್ರ (CST, astra)
[3]ಮೂಲಭೂತ ಸೌಕರ್ಯ, ಸುಸ್ಥಿರ ಸಾರಿಗೆ ಮತ್ತು ನಗರ ಯೋಜನಾ ಕೇಂದ್ರ [CiSTUP]
ಭಾರತೀಯ ವಿಜ್ಞಾನ ಮಂದಿರ, ಬೆಂಗಳೂರು, ಕರ್ನಾಟಕ, 560 012
cestvr@ces.iisc.ernet.in, ganesh@ces.iisc.ernet.in
[4]ಅದಮ್ಯ ಚೇತನ, ಶ್ರೀಮತಿ ಗಿರಿಜಾ ಶಾಸ್ತ್ರಿ ಮೆಮೋರಿಯಲ್ ಟ್ರಸ್ಟ್, ಅನ್ನಪೂರ್ಣ- ಸಮುದಾಯ ಭವನ, ಕೆಂಪೆಗೌಡ ನಗರ, ಬೆಂಗಳೂರು, 560019 tejaswini.acf@gmail.com
[5]ರಾಮಕೃಷ್ಣ ಆಶ್ರಮ, ಶಿವನಹಳ್ಳಿ ಆನೇಕಲ್, ಬೆಂಗಳೂರು
vishnumayananda@gmail.com

(ಅಪೂರ್ಣ)

2ನೇ ಪುಟದಿಂದ ಮುಂದುವರೆದಿದೆ

ನಮ್ಮ ಮೇಲೆ ನಾವು ಭಾರ ಹಾಕಿಕೊಂಡು ಜೀವಿಸುತ್ತಿದ್ದೇವೆ. ಅದನ್ನು ಬೇರಾರೂ ಹಾಕಿರದೆ ನಾವೇ ಹಾಕಿಕೊಂಡು ಅದರ ಒತ್ತಡದಡಿ ಬದುಕುತ್ತಿದ್ದೇವೆ. ಬದುಕಿಗೆ ಚೈತನ್ಯವನ್ನು ನೀಡುವ ಶಕ್ತಿಯೊಡನೆ ಉಲ್ಲಾಸದ ಕ್ಷಣಗಳು ಹಾಸುಹೊಕ್ಕಾಗಿದೆ. ಅದು 'ವ್ಯಕ್ತಿ ತೋರ್ಪಡಿಸುವ ಪ್ರತಿಭಟನಾ ಮನೋಭಾವ, ಪುಟಿದೇಳುವ ಸಾಮರ್ಥ್ಯ ಮತ್ತು ಬಲವಾಗಿ ಹೊಳೆಯುವ ಕಣ್ಣುಗಳು, ಮೇಲಕ್ಕೆ ಬಾಗಿದ ತುಟಿಗಳು, ವಿವೇಚನಾಯುಕ್ತ ಮಾತುಗಳಿಗಿಂತ ಭಿನ್ನವಾದ ಶಬ್ಧದ ಹೊರಹೊಮ್ಮುವಿಕೆ ಅಥವಾ ಗಹನವಾದ ವಿಚಾರಗಳ ಮೂಲಕ ಹೊರಕ್ಕೆ ಹರಿದು ಬರುತ್ತದೆ' ಎಂದು ಮೈಕ್ ಮಾರ್ಗಿ ಅಭಿಪ್ರಾಯ ಪಟ್ಟಿದ್ದಾನೆ.

ವ್ಯಕ್ತಿಯ ಜೀವನದಲ್ಲಿ ಉಲ್ಲಾಸ ನಗುವಿನ ರೂಪದಲ್ಲಿ ಪ್ರಕಟಗೊಳ್ಳುತ್ತದೆ. ಅದು ನಮ್ಮಲ್ಲಿ ಮೂಡುವ ನಕಾರಾತ್ಮಕ ವಿಚಾರ ಗಳನ್ನು ಭಗ್ನಗೊಳಿಸಿ, ಸಕಾರಾತ್ಮಕ ವಿಚಾರಗಳನ್ನು ಮೊಳೆಯಿಸುತ್ತದೆ; ಬಿಗಿದ ಸ್ನಾಯುಗಳನ್ನು ಸಡಿಲಗೊಳಿಸುತ್ತದೆ; ದೇಹದಲ್ಲಿ ಪ್ರತಿರೋಧ ಶಕ್ತಿಯನ್ನು ಬೆಳೆಸುತ್ತದೆ; ರಕ್ತ ಒತ್ತಡವನ್ನು ಸ್ವಲ್ಪ ಮಟ್ಟಿಗೆ ಕೆಳಕ್ಕಿಳಿಸುತ್ತದೆ ಮತ್ತು ಒಳ್ಳೆಯ ಭಾವನೆಗಳ ಬೆಳವಣಿಗೆಯನ್ನು ಪ್ರಚೋದಿಸುವ ಎಂಡಾರ್ಫಿನ್ ರಸಾಯನಿಕಗಳ ಬಿಡುಗಡೆಯನ್ನು ಪ್ರಚೋದಿಸುತ್ತದೆ.

ಹಾಸ್ಯ, ವಿನೋದ, ನಗುವಿನಿಂದಾಗಿ ಜೀವನ ಉತ್ತಮಗೊಂಡು ಅದಕ್ಕೊಂದು ಅರ್ಥ ದೊರಕುತ್ತದೆ. ವ್ಯಕ್ತಿ ಸಂತೋಷ ಮಾಧ್ಯಮದ ಮೂಲಕ ವಿಹರಿಸುತ್ತಾನೆ. ಅದು ಒತ್ತಡದ ಬದುಕಿನಿಂದ ಬಸವಳಿದ ವ್ಯಕ್ತಿಯ ಜೀವನಕ್ಕೆ ವಿರಾಮ ನೀಡಿ ಆಹ್ಲಾದಕರತೆಗೆಡೆ ಮಾಡಿಕೊಟ್ಟು, ಜೀವನವನ್ನು ಒಳ್ಳೆಯ ದೃಷ್ಟಿಕೋನ ದಿಂದ ನೋಡುವ ಅವಕಾಶವನ್ನು ದೊರಕಿಸಿಕೊಡುತ್ತದೆ. ನಗುವುದನ್ನಾಗಲೀ, ಅಳುವುದನ್ನಾಗಲೀ ವ್ಯಕ್ತಿಗೆ ಯಾರೂ ಕಲಿಸಿಕೊಡಬೇಕಾಗಿಲ್ಲ. ಅವು ನೈಸರ್ಗಿಕವಾಗಿ ವ್ಯಕ್ತಿಯಲ್ಲಿ ಬೆಳೆದು ಬರುತ್ತವೆ. ಜೀವರಾಶಿಯಲ್ಲಿ ಮನುಷ್ಯ ಮಾತ್ರ ಹಾಸ್ಯ ಪ್ರವೃತ್ತಿಯನ್ನು ಹೊಂದಿದ್ದಾನೆ.

ಪ್ರತಿಯೊಂದು ಜನಪದ, ಸಮಾಜ ಇಲ್ಲವೆ ಸಂಸ್ಕೃತಿಯಲ್ಲಿ ಕೆಲವರಾದರೂ ತಮ್ಮ ಹಾಸ್ಯದಿಂದ ನಗುವಿನ ಅಲೆಗಳನ್ನೆಬ್ಬಿಸಿ ಬೇರೆಯವರಲ್ಲಿ ಗುಪ್ತವಾಗಿರುವ ತಾಣಗಳನ್ನು ತಲುಪುವ ಜಾಣ್ಮೆಯನ್ನು ಹೊಂದಿದವರಾಗಿದ್ದು, ಅವರ ಸುತ್ತ ಸದಾ ಹಾಸ್ಯದ ಹೊನಲು ಹರಿಯುತ್ತಿರುತ್ತದೆ. ಅದರ ಫಲವಾಗಿ ದೇಹದೊಳಗೆ ಹತ್ತಿಕ್ಕಲ್ಪಟ್ಟ ಸಂತೋಷವನ್ನು ಪ್ರತಿಭಟಿಸುವ ಅಂಶಗಳು ದೂರ ಹೋಗುವ ಮಾರ್ಗವನ್ನು ಕಂಡುಕೊಳ್ಳುತ್ತವೆ. ಅದು ನಮ್ಮಲ್ಲಿ ಮೊಳೆಯುತ್ತಿರುವ ನಕಾರಾತ್ಮಕ ಮನೋಭಾವವನ್ನು ತಿರಸ್ಕರಿಸುತ್ತದೆ, ಇಲ್ಲವೆ ಅದಕ್ಕೆ ತಡೆಯನ್ನೊಡ್ಡುತ್ತದೆ. ವ್ಯಕ್ತಿ ಒತ್ತಡದಡಿ ಸಿಲುಕಿ ನರಳುವುದು ತಪ್ಪಿ, ಆತನಲ್ಲಿ ಎದ್ದ ಹಾಸ್ಯದ ಅಲೆ ಹೊರಬಂದು ಮತ್ತೊಬ್ಬರೊಡನೆ ಸಂಪರ್ಕ ಪಡೆಯುತ್ತದೆ. ಅವರಿಂದ ಮತ್ತೆ ಹಾಸ್ಯದ ಅಲೆ ಹೊರಬಂದು ಮತ್ತೊಬ್ಬರ ಗುಪ್ತ ತಾಣವನ್ನು ರಸಾಯನಿಕ ಕ್ರಿಯೆಯ ರೂಪದಲ್ಲಿ ಒಳಸೇರುತ್ತದೆ. ಹೀಗೆ ಹಾಸ್ಯದ ಹೊನಲು ವೇಗ ಗತಿಯಲ್ಲಿ, ಅಪ್ರಯತ್ನಿತವಾಗಿ ಅಂಟು ಜಾಡ್ಯದಂತೆ ಒಬ್ಬರಿಂದ ಮತ್ತೊಬ್ಬರಿಗೆ ಹರಡಿ ವ್ಯಕ್ತಿಗೆ ಚೈತನ್ಯವನ್ನು ನೀಡಿ ಹೊಸ ಹುಮ್ಮಸ್ಸಿನಿಂದ ಕಾರ್ಯ ಮಾಡಲು ಅವಕಾಶ ಮಾಡಿಕೊಡುತ್ತದೆ. ಹೀಗೆ ನಗೆಯ ಅಲೆ ಒಬ್ಬರಿಂದ ಮತ್ತೊಬ್ಬರಿಗೆ ಹರಡುವುದನ್ನು ಕುರಾನ್, ಉಲ್ಲೇಖಿಸುತ್ತ, "ತನ್ನ ಜೊತೆಯವರನ್ನು ನಗಿಸುವವ ಸ್ವರ್ಗಕ್ಕೆ ಅರ್ಹ" ಎಂದಿದೆ. ಹಾಗಾಗಿ ನಗೆ ಇಬ್ಬರ ಮಧ್ಯ ಇರುವ ಅತ್ಯಂತ ಕಡಿಮೆ ದೂರ.

ನಾಡೋಜ ಡಾ. ಪಿ.ಎಸ್. ಶಂಕರ್
psshankar@hotmail.com